ಗಂಡುಮಗು ಆಗಲಾರದವ್ರಿಗೆ ವಂಶದ ಕುಡಿನೇ ಹುಟ್ಟಿರುತಿತ್ತು. ಮಕ್ಕಳು ಆಗಲಾರದವ್ರಿಗೆ ಡಜನ್‌ಗಟ್ಲೆ ಮಕ್ಳು ಆಗಿರುತಿದ್ವು. ಪವಾಡದಂತೆ ಇಷ್ಟೆಲ್ಲಾ ಆಗಲಿಕ್ಕೆ ಏನೇನೂ ಕಿಸಾಮತ್ ಮಾಡುತ್ತಿರಲಿಲ್ಲ. ದೇವ್ರುಹೊತ್ತು ಮನಿಮುಂದ ಸಾಮಾನ್ಯವಾಗಿಯೇ ನಿಂತಿರುತಿದ್ದ. ಮನಿಮುಂದ ದೇವ್ರು ಬಂದ ಸೌಭಾಗ್ಯಕ್ಕೆ ಭಕ್ತರು ಹಿಗ್ಗಿಲೆ ಓಡೋಡಿ ಬಂದು ತುಂಬಿದ ಕೊಡ ನೀರಾಕಿ ಪಾದಕ್ಕ ಸಣಮಾಡಿ ಹೆಣ್ಣುಮಕ್ಕಳು ಉಡಿವಡ್ಡೋದು, ಗಣ್‌ಮಕ್ಳು ಬೊಗಸಿವಡ್ಡಿ ವರ ಪಡಕೊಳ್ಳೋದು ನಡಿದಿರುತಿತ್ತು. ಬಾಳಹೊತ್ತು ತನ್ನಮುಂದ ಮೈಮರ್ತು ಬೇಡುವುದನ್ನು ಗಮನಿಸಿ, ತಾನೊಂದಿಷ್ಟು ಗಂಭೀರವಾಗಿ ದೇವ್ರನ್ನು ಕುಣಿಸಿ, ಮೈ ಗದಗದಿಸಿ ಕಣ್ಣುಮುಚ್ಚಿ, ಮೂಗುಮುರಿದು ದೇವ್ರ ಮೈಮ್ಯಾಲಿದ್ದ ಕೊಬ್ರಿ ಬಟ್ಲನೋ, ಹೂದಂಡಿನೋ, ಉತ್ತತ್ತಿನೋ, ಕಲ್‌ಸಕ್ರಿನೋ, ಬಣ್ಣಬಣ್ಣ ಬಟ್ಟೆ ದಟ್ಟಿನೋ ವಟಗುಟ್ಟುತ್ತ ಉಡಿಯೊಡ್ಡಿದ ಭಕ್ತರಿಗೆ ಕೊಡುತಿದ್ದ. ಬಗಲ ಜೋಳಿಗೆ ಹಿಡಿದು ಆನೆ ಮಾವುತನಂಗ ನಿಂತಿರುತಿದ್ದ ಮುಲ್ಲಾಸಾಬಿ ತಂದೊಂದಿಷ್ಟು ಶಕ್ತಿ ಇರ್ಲಂತ ಭಕ್ತರು ಕೊಟ್ಟ ಕೆಂಪ್‌ಸಕ್ರಿ ದೇವ್ರಿಗೆ ಓದ್ಸಿ, ಸಣ್‌ಮಕ್ಳಿದ್ರ ನವಿಲು ಗರಿಯಂಗ ದೇವ್ರು ಮುಖಕ್ಕ ಆಡಿಸಿ ಪಂಚಾರತಿಯೊಳಗ ಲೋಬಾನ ಹಾಕಿ ತುಟಿ ಪಟಗುಟ್ಟಿಸಿ ಹೊಗೆಯೆಬ್ಬಿಸಿ ಇದ್ದಲ್ಲಿಯೇ ಸ್ವರ್ಗ ನಿರ್ಮಿಸುವುದನ್ನ ಮಸ್ತು ಕಲಿತುಬಿಟ್ಟಿದ್ದ. ದಾನಪ್ಪ ಲೋಬಾನದ ಹೊಗಿಯೊಳಗನೇ ಭಕ್ತರ ಮನಿಗೆ ಕೆಟ್ಟದು ಆಗೋದಿದ್ರೆ ಮುಗುಲು ಅಳತೈತಿ.. ಮನ್ಯಾಗ ಕೆಂಡ ಕುಂತೈತಿ.. ತೇರಿನ ಗಾಲಿ ಉಳತೈತಿ.. ಜಂತಿಮಣ್ಣು ಉದ್ರತೈತಿ.. ಕದ ಮುಚ್ಚ್ಯಾರ..ಅಂತ ಸಿಟ್ಟಿಲೆ ಕೂಗಿ ಹೇಳುತಿದ್ದ. ಮನಿಗೆ ಒಳ್ಳೆದು ಆಗೋದಿದ್ರ 'ಹಸ್ರುಬಳೆ ನಗುತಾವು.. ಮುಗುಲಾಗ ಚಂದ್ರ ಬರಕತ್ತ್ಯಾನ.. ಬೀಜ ಅಂಗಿಬಿಚ್ಚಿ ಕುಂತೈತಿ.. ಸೆರಗಿನ ನವಿಲು ನಗತೈತಿ.. ಗಂಧದ ಕೊಲ್ಡಿಗೆ ಚಿಗುರು ಮೂಡೈತಿ.. ತೇರಿಗೆ ರಂಗು ಮೂಡೈತಿ..' ಅಂತ ಒಳ್ಳೆದು ಆಗೋದನ್ನ ನಕ್ಕಂತ ಒಡಪಿನ ರೂಪದಲ್ಲಿ ಹೇಳಿ ಸರಸರ ಮುಂದಲ ಮನಿಗೆ ಹೋಗಿರುತಿದ್ದ. ಇದನ್ನೆಲ್ಲಾ ಕಣ್ತುಂಬ ನೋಡುತಿದ್ದ ಭಕ್ತರು ಶುಭ ನುಡಿದ್ರ ಕೇಕೆ ಹೊಡೆದು ದೂಲ್ವಾ.. ದೂಲ್ವಾಂತ ಹಿಂದಿಂದ ಓಡಾಡುತಿದ್ರು. ಕೆಟ್ಟದು ಆಗೋದನ್ನ ಹೇಳಿದ್ರ 'ಅಬಬಾ.. ತಿಳಿದಂಗ ಆಯ್ತಲ್ಲ ಮನಿಕಾಟ..'ಅಂತ ಗಾಬರಿಯಾಗಿ ಮೈಸೋತವರಂಗ ಓಡುತಿದ್ರು. ಇಷ್ಟೆಲ್ಲಾ ಆದಮೇಲೆ ಕೊನಿಗೆ ಹೊಳಿ ದಾಟಿಸಿಕೊಂಡು ದೇವ್ರನ್ನ ಮಸೂತ್ಯಾಗ ಕೂಡಿಸುತಿದ್ರು. ದೇವ್ರು ಹಿಂದಹಿಂದನೇ ಸಾಕಷ್ಟು ದಾನ ಧರ್ಮಂತ ಭಕ್ತರು ಕಂಡಾಪಟಿ ಕೊಟ್ಟಿರುತಿದ್ರು. ಸವಾರಿ ಮುಗಿಯುವುದರೊಳಗ ಮುಲ್ಲಾಸಾಬಿಗೆ ಸಾಕಷ್ಟು ಲಾಭನೇ ಆಗಿರುತಿತ್ತು. ಭಕ್ತರು ಕೊಟ್ಟಿದ್ದನ್ನ 'ನಮ್ ಬಡ ಮುಲ್ಲಾಸಾಬಿಗೆ ಇರಲಿ, ಇಲ್ಲಂದ್ರ ಊರಾಗಿನ ಬಡಬಗ್ರಿಗೆ ಕೊಡ್ರಿ..' ಅಂತ ದಾನಪ್ಪ ಖಾಲಿ ಕುದ್ರಿಯ ಮನುಷ್ಯನಾಗಿ ಹೊಳಿಕಡೆ ಹೋಗಿಬಿಡುತಿದ್ದ. ವರ್ಸಕ್ಕಿಷ್ಟು ದಾನಪ್ಪನ ದೇವ್ರಿಗೆ ಭಾರಿ ಬೇಡಿಕೆ ಹೆಚ್ಚಾದಂಗೆಲ್ಲಾ ತನ್ನ ಜತಿಗೆ ದೇವ್ರು ಹಿಡಿಯುವ ನಾಕುಮಂದಿಗೆ ಹೊಟ್ಟಿಕಿಚ್ಚು ತುಂಬಿ ತುಳುಕುವಂಗ ಬೆಳಿಸಿಬಿಟ್ಟಿತ್ತು. ಈ ನಾಕು ಮಂದ್ಯಾಗ ರಶೀದಸಾಬು ಮಾತ್ರ ದಾನಪ್ಪನ ಮ್ಯಾಲ ಸಾಕಷ್ಟು ಕುನಸಿಟ್ಟಿದ್ದ. ಏನಾದ್ರುಮಾಡಿ ಹೆಸ್ರು ಕೆಡಿಸಿ ಆ ಸ್ಥಾನಕ್ಕ ಏರಿ, ಹೆಸ್ರು ಮಾಡಬೇಕಂತ ಹೊಳಿಕಡೆ ಭಕ್ತರನ ಮತ್ತು ಊರ ಭಕ್ತರನ ತನ್ನ ಕಡಿಗೆ ಎಳಕೊಳ್ಳಲು ಪ್ರತಿದಿನ ಏನಾದ್ರು ಉಪಾಯ ಹೂಡ್ತಾನೆ ಬಂದಿದ್ದ.

ಈಗೀಗ ದಾನಪ್ಪನ ಮಗ ಬೀರ ಭರ್ತಿ ವಯಸ್ಸಿಗೆ ಬಂದು ಊರಾಗ ಓಡಾಡದು, ಅಪ್ಪನ ಜತೆ ದೇವ್ರು ಕೆಲ್ಸದಾಗ ಭಾಗಿಯಾಗೋದು ನಡಿಸಿದ್ದ. ಪ್ರತಿ ಗುರುವಾರ ಫೇಸ್‌ಬುಕ್, ವ್ಯಾಟ್ಸಾಪ್, ಇನ್‌ಸ್ಟಾಗ್ರಾಂಲ್ಲಿ ಅಪ್ಪನ ಹೆಸರಲ್ಲಿ ಯಾವುದೋ ಒಂದು ವಚನ ಬರೆದು, ಹಸ್ತ ಮುಂದಮಾಡಿ ಆಶೀರ್ವದಿಸಿದ ಅಪ್ಪನ ಚಿತ್ರ ಇಟ್ಟು, ಭಕ್ತಿಪೂರಕವಾದ ಹಾಡುಸೇರಿಸಿ ಎಡಿಟ್‌ಮಾಡಿ ನೂರಾರು ಮಂದಿಗೆ ಸೆಂಡ್‌ಮಾಡಿ, ಶೇರ್‌ಮಾಡಲು ಹೇಳುತಿದ್ದ. ದೊಡ್ಡದೇವ್ರು ಹೋರುವ ದಾನಪ್ಪನ ಮಗಂತ ನೂರಾರು ಫಾಲೋವರ್ಸ್ ಕೂಡ ಆಗಿದ್ರು. ಬರುಬರುತ್ತ ಬೀರನ ಫಾಲೊವರ್ಸ್ ಅಪ್ಪನ ಸವಾರಿ ದಿನದ ವಿಡಿಯೋ ತುಣುಕು, ಇನ್ಯಾವುದೋ ಕಾರ್ಯಕ್ರಮದಲ್ಲಿ ಪ್ರವಚನ ನೀಡಿ ಆಶೀರ್ವದಿಸಿದ ಪಟಗಳನ್ನು, ಹೇಳಿಕೆಗಳನ್ನು ತಮ್ಮ ಸ್ಟೇಟಸ್‌ಗೆ, ಡಿಪಿಗೆ ಇಟ್ಟುಕೊಂಡು, ಶೇರ್‌ಮಾಡೋದು ದಿನಂಪ್ರತಿ ನಡಿದೇ ಇರುತಿತ್ತು. ಅಪ್ಪನ ವರ್ಚಸ್ಸಿನ ಜತಿಗೆ ಬೀರನ ವರ್ಚಸ್ಸು ಮೆಲ್ಲಕ ಮೊಳಕಿಯಂಗ ಬೆಳಿಯತೊಡಗಿತ್ತು. ಈಗೀಗ ಬೀರನೂ ಖಾಲಿಪುಕ್ಸಟ್ಟೆ ಕೂರುತ್ತಿರಲಿಲ್ಲ.